"ಮಧುರ ಮಕ್ಕಳೇ - ನೀವು ಆತ್ಮೀಯ ಸಂಪಾದನೆಯಲ್ಲಿ ಬಹಳ-ಬಹಳ ಗಮನವನ್ನು ಕೊಡಬೇಕು, ತಲೆಯ ಮೇಲೆ ವಿಕರ್ಮಗಳ ಹೊರೆ ಬಹಳಷ್ಟು ಇದೆ ಆದ್ದರಿಂದ ಸಮಯವನ್ನು ವ್ಯರ್ಥ ಮಾಡಬಾರದು"

ಪ್ರಶ್ನೆ: ಯಾವ ಮಕ್ಕಳ ಗಮನ ಆತ್ಮೀಯ ಸಂಪಾದನೆಯಲ್ಲಿ ಇರುತ್ತದೆ ಅವರ ಲಕ್ಷಣಗಳು ಏನು?

ಉತ್ತರ: ಅವರು ಎಂದೂ ಸಹ ಅಲ್ಲ-ಸಲ್ಲದ ಮಾತಿನಲ್ಲಿ ತನ್ನ ಸಮಯವನ್ನು ಹಾಳು ಮಾಡುವುದಿಲ್ಲ. ಶರೀರ ನಿರ್ವಾಹಣೆಯನ್ನು ಮಾಡುತ್ತಿದ್ದರೂ ಸಹ ಆತ್ಮೀಯ ಸಂಪಾದನೆಯಲ್ಲಿ ತೊಡಗಿಸುತ್ತಾರೆ. ಬೆಳಗ್ಗೆ ಎದ್ದು ಬಹಳ-ಬಹಳ ಪ್ರೀತಿಯಿಂದ ತಂದೆಯನ್ನು ನೆನಪು ಮಾಡುತ್ತಾರೆ. ನೆನಪಿನಿಂದ ಆತ್ಮ ಹಾರುತ್ತಿರುತ್ತದೆ. 2. ಅವರು ತಂದೆಯ ಸಮಾನ ದಯಾ ಹೃದಯಿ ಆಗಿ ತಮ್ಮ ಮೇಲೆ ಮತ್ತು ಸರ್ವರ ಮೇಲೆ ದಯೆ ತೋರಿಸುತ್ತಾರೆ. ಎಲ್ಲರಿಗೂ ತಂದೆಯ ಪರಿಚಯವನ್ನು ಕೊಡುತ್ತಾರೆ.

ಗೀತೆ: ನೀವೇ ತಾಯಿ-ತಂದೆ ಆಗಿದ್ದೀರಿ.................

ಓಂ ಶಾಂತಿ. ಗೀತೆಯಲ್ಲಿ ಮಾತಾ-ಪಿತರ ಮಹಿಮೆಯನ್ನು ಕೇಳಿದಿರಿ. ಹೇಗೆ ಮನೆಯಲ್ಲಿ ಮಕ್ಕಳಿರುತ್ತಾರೆಂದರೆ ಮಾತಾ-ಪಿತ, ತಾತ ಇರುತ್ತಾರಲ್ಲವೇ. ತಂದೆಯ ಮೂಲಕ ತಾತನಿಂದ ಆಸ್ತಿ ಸಿಗುತ್ತದೆ ಏಕೆಂದರೆ ತಾತನ ಆಸ್ತಿ ಹಿರಿಯರ ಅಸ್ತಿಯಾಗಿರುತ್ತದೆ. ಇವರು ಎಲ್ಲರಿಗಿಂತ ಹಿರಿಯರಾಗಿದ್ದಾರೆ. ಪ್ರಪಂಚದವರಿಗಾದರೆ ಗೊತ್ತಿಲ್ಲ. ಮಕ್ಕಳಿಗೆ ತಿಳಿದಿದೆ. ನೀವೇ ಮಾತಾ-ಪಿತಾ ಈ ಮಾತು ತಾತನಿಗೆ ಹೇಳುವ ಶಬ್ದವಾಗಿದೆ. ಅಂದಾಗ ಅವರ ಪರಿಚಯವನ್ನು ಕೊಡಬೇಕು ಸನ್ಮುಖದಲ್ಲಿ ಇರಲಿ ಅಥವಾ ಚಿತ್ರದ ಮೂಲಕವಾಗಲಿ, ಪ್ರೋಜೆಕ್ಟರ್ ಮೂಲಕವಾಗಲಿ ತಾತನ ಪರಿಚಯವನ್ನು ಕೊಡುವುದು ಬಹಳ ಅವಶ್ಯಕತೆ ಇದೆ. ಶರೀರದ ತಾತ ಸಾಕಾರದಲ್ಲಿ ಇರುತ್ತಾರೆ. ಈಗ ನಿಮ್ಮ ಬುದ್ಧಿಯಲ್ಲಿ ಮೊದಲು ಯಾರು ಬಂದರು? ತಾವು ಭಲೆ ಪ್ರೋಜೆಕ್ಟರ್ ಮೂಲಕ ತಿಳಿಸಿಕೊಡಿ. ಅದನ್ನೂ ಸಹ ಒಂದಾದ ನಂತರ ಒಂದು ಚಿತ್ರವನ್ನು ತೋರಿಸಬೇಕು. ಮೊಟ್ಟಮೊದಲು ಪರಮಪಿತ ಪರಮಾತ್ಮನ ತಿಳುವಳಿಕೆಯನ್ನು ಕೊಡಬೇಕು. ಪರಮಪಿತ ಪರಮಾತ್ಮನ ಜೊತೆ ನಿಮ್ಮ ಸಂಬಂಧ ಏನು? ನಂತರ ಪ್ರಜಾಪಿತ ಬ್ರಹ್ಮನ ಜೊತೆ ಏನು ಸಂಬಂಧ? ಮೊದಲು ಶಿವನ ಚಿತ್ರವನ್ನು ತೋರಿಸಬೇಕು ನಂತರ ಪ್ರದರ್ಶನದಲ್ಲಿ ಯಾವುದನ್ನು ತಿಳಿಸುತ್ತೀರಿ ಅಥವಾ ಮ್ಯಾಗಿಜೈನ್ ಯಾವುದು ಮಾಡುತ್ತೀರೋ ಬರಹದ ಮೂಲಕ ಮೊದಲು ಪರಿಚಯವನ್ನು ಕೊಡಿ. ಗೀತೆಯಲ್ಲಿ ಭಗವಾನ್ ವಾಚ ಎಂದು ಬರೆಯಲ್ಪಟ್ಟಿದೆ ಅಂದಾಗ ಮೊದಲು ಭಗವಂತನ ಪರಿಚಯ ಕೊಡಬೇಕು. ನಿಮ್ಮೆಲ್ಲರ ಬುದ್ಧಿ ಮೇಲೆ ಹೋಗಿದೆ. ಎಲ್ಲರಿಗಿಂತ ಶ್ರೇಷ್ಠ ಪರಮಪಿತ ನಿರಾಕಾರ ಶಿವ ತಂದೆ ಆಗಿದ್ದಾರೆ. ನಂತರ ಬ್ರಹ್ಮಾ-ವಿಷ್ಣು-ಶಂಕರರು. ಆಮೇಲೆ ಇಲ್ಲಿ ಬಂದರೆ ಹೇಗೆ ಮನೆಯಲ್ಲಿ ಮಾತಾ-ಪಿತಾ ಮತ್ತು ತಾತ ಕುಳಿತಿರುತ್ತಾರೆ, ಅವರೆಲ್ಲರೂ ಹದ್ದಿನವರು, ಇವರು ಬೇಹದ್ದಿನವರು. ಚಿತ್ರ ಸಹಿತವಾಗಿ ಲೇಖನವಿರಬೇಕು. ವ್ಯತ್ಯಾಸವನ್ನೂ ಸಹ ತಿಳಿಸಬೇಕು. ಅನೇಕ ಮನುಷ್ಯರು ಹಠಯೋಗವನ್ನು ಕಲಿಸುತ್ತಾ ಬಂದಿದ್ದಾರೆ. ಒಬ್ಬ ಪರಮಾತ್ಮ ರಾಜಯೋಗವನ್ನು ಕಲಿಸುತ್ತಾರೆ. ಇದರಿಂದ ಮುಕ್ತಿ-ಜೀವನ್ಮುಕ್ತಿ ಸಿಗುತ್ತದೆ. ಇಲ್ಲಿ ಒಬ್ಬರೇ ಪರಮಪಿತ ಪರಮಾತ್ಮ ಶಿವ ಭಗವಾನುವಾಚವಾಗಿದೆ. ಹೇಗೆ ಲೌಕಿಕ ತಾಯಿ-ತಂದೆ, ತಾತ ಮಕ್ಕಳ ಬುದ್ಧಿಯಲ್ಲಿ ನೆನಪಿಗೆ ಬರುತ್ತಾರೆ. ಇಲ್ಲೂ ಸಹ ನಿಮ್ಮ ಬುದ್ಧಿಯಲ್ಲಿ ಕಲ್ಪದ ಹಿಂದಿನಂತೆ ಇದೆ. ಇವರು ಪಾರಲೌಕಿಕವಾಗಿದ್ದಾರೆ. ಅದು ಲೌಕಿಕವಾಗಿದೆ. ಇವರು ಶಿವತಂದೆ ಆಗಿದ್ದಾರೆ ಎಂಬ ನಿಶ್ಚಯ ನಿಮಗಿದೆ. ನಮ್ಮ ತಂದೆ ಆಗಿದ್ದಾರೆ ಅಂದಾಗ ಅವರನ್ನು ನಾವು ನೆನಪು ಮಾಡಬೇಕು. ಆದರೆ ಮಕ್ಕಳು ಮರೆತುಬಿಡುತ್ತಾರೆ. ಸಮಯವನ್ನು ಬಹಳಷ್ಟು ವ್ಯರ್ಥ ಮಾಡುತ್ತಾರೆ. ಸಮಯವನ್ನು ವ್ಯರ್ಥ ಮಾಡಬಾರದು ಏಕೆಂದರೆ ವಿಕರ್ಮಗಳ ಹೊರೆ ತಲೆಯ ಮೇಲೆ ಬಹಳಷ್ಟು ಇದೆ. ಆತ್ಮನ ಮೇಲೆ ತುಕ್ಕು ಹಿಡಿದಿದೆ ಅಂದಾಗ ಪರಮಪಿತ ಪರಮಾತ್ಮ ಯಾರು? ಇದರ ಬಗ್ಗೆ ಬರೆಯಿರಿ. ಪರಮಾತ್ಮನ ಚಿತ್ರ ಮತ್ತು ಶ್ರೀಕೃಷ್ಣನ ಚಿತ್ರದ ಬಗ್ಗೆ ಮತ್ತೆ-ಮತ್ತೆ ತಿಳಿಸಿಕೊಡಬೇಕು. ಸ್ವರ್ಗ ಮತ್ತು ನರಕದ ಗೋಲ ಬಹಳ ಚೆನ್ನಾಗಿ ಪ್ರಸಿದ್ಧವಾಗಿದೆ. ನರಕದ ಗೋಲದ ಮೇಲೆ ಇದು ರಾವಣ ರಾಜ್ಯ, ಭ್ರಷ್ಟಾಚಾರಿ ಜಗತ್ತು ಮತ್ತು ಸ್ವರ್ಗದ ಗೋಲದ ಮೇಲೆ ಇದು ಶ್ರೇಷ್ಠಾಚಾರಿ ಜಗತ್ತು ಎಂದು ಬರೆಯಬೇಕು. ಮತ್ತು ಸ್ವರ್ಗ ಇಷ್ಟು ಸಮಯ ಇರುತ್ತದೆ, ನರಕ ಇಷ್ಟು ಸಮಯ ಇರುತ್ತದೆ ಎಂದು ಬರೆಯಬೇಕು. ಏರುವಕಲೆ, ಇಳಿಯುವಕಲೆಯನ್ನೂ ಸಹ ನೋಡಿ ಏಕೆಂದರೆ ಇಳಿಯುವಕಲೆಯಲ್ಲಿ 5000 ವರ್ಷ ಮತ್ತು ಏರುವಕಲೆ ಒಂದು ಸೆಕೆಂಡಿನಲ್ಲಿ ಅಂದಾಗ ಜಂಪ್ ಮಾಡಬಹುದು. ಈ ಮುಖ್ಯ ಮಾತು ತಿಳಿಸಿಕೊಡುವುದಾಗಿದೆ ನಂತರ ವಿರಾಠರೂಪ, ಯಾವುದರಲ್ಲಿ ಬ್ರಾಹ್ಮಣರ ಶಿಖೆ ಈಶ್ವರೀಯ ಸಂಪ್ರದಾಯವಾಗಿದೆ. ಬ್ರಹ್ಮನ ಮುಖದ ಮೂಲಕ ರಚನೆ ಆದ ನಿಮ್ಮ ಬ್ರಾಹ್ಮಣಕುಲ ಪ್ರಸಿದ್ಧವಾದದ್ದು, ಸರ್ವೋತ್ತಮವಾಗಿದೆ. ಎಲ್ಲರಿಗೂ ತಿಳಿಸಿಕೊಡಲು ಈ ಚಿತ್ರ ಬಹಳ ಚೆನ್ನಾಗಿದೆ. ವೆರೈಟಿ ಧರ್ಮದ ವೃಕ್ಷವು ಬಹಳ ಚೆನ್ನಾಗಿದೆ. ಮಕ್ಕಳು ಸ್ವದರ್ಶನಚಕ್ರಧಾರಿಗಳಾಗಬೇಕು. ಅಂದಾಗ ಅದು ಹೇಗೆ ತಿರುಗುತ್ತದೆ ಎಂದು ಚಕ್ರದ ಜ್ಞಾನವನ್ನು ಕೊಡಬೇಕು. ಬ್ರಹ್ಮಾ-ಸರಸ್ವತಿಯರಿಗೆ ನಾಯಕ-ನಾಯಕಿಯರ ಪಾತ್ರ ಹೇಗಿದೆ, ಈ ಗೋಲದ ಚಿತ್ರ ದೊಡ್ಡದಾಗಿರಬೇಕು, ಹೆಚ್ಚೆಂದರೆ ಒಂದು-ಒಂದುವರೆ ಗಂಟೆಗಳ ಕಾಲ ಪ್ರೋಜೆಕ್ಟರನ್ನು ತೋರಿಸಬೇಕು ಏಕೆಂದರೆ ಮನುಷ್ಯರು ಈ ಮಾತಿನಲ್ಲಿ ಸುಸ್ತಾಗಿಬಿಡುತ್ತಾರೆ. ಇದೇನೂ ಕಥೆ ಅಲ್ಲ. ಇದು ಜ್ಞಾನದ ಮಾತಾಗಿದೆ.

ಮೊದಲು ಬರೆಯಿರಿ ನಂತರ ಒಳಗೆ ಬರಲು ಸಾಧ್ಯವಾಗುತ್ತದೆ, ಇದೆಲ್ಲವನ್ನು ತೋರಿಸಲು ಟಿಕೆಟ್ ಮಾಡಬೇಕು. ಹಣದ ಟಿಕೆಟ್ ಅಲ್ಲ ಆದರೆ ಎಂಟರಿ ಪಾಸ್ (ಪ್ರವೇಶದ ಚೀಟಿ. ಎಂಟರಿ ಪಾಸ್ನ್ನು ಕೊಟ್ಟು ದೊಡ್ಡ-ದೊಡ್ಡ ವ್ಯಕ್ತಿಗಳನ್ನು ಕರೆಯಬೇಕು. ದೊಡ್ಡ-ದೊಡ್ಡ ವ್ಯಕ್ತಿಗಳನ್ನು ಕರೆಸಿ ಅನಿಸಿಕೆಯನ್ನು ಬರೆಸಬೇಕು. ಗುಂಪು-ಗುಂಪಾಗಿ ಬಂದರೆ ಹೇಗೆ ಬರೆಯಲು ಸಾಧ್ಯ? ಮತ್ತು ಹೇಗೆ ತೋರಿಸುವುದು ಹಾಗೂ ತಿಳಿಸಲು ಸಾಧ್ಯವಾಗುತ್ತದೆ, ಆದ್ದರಿಂದ ಮೊಟ್ಟಮೊದಲು ದೊಡ್ಡ ವ್ಯಕ್ತಿಗಳನ್ನು ಕರೆಸಿ ಬರೆಸಬೇಕು ನಂತರ ಸಾಮಾನ್ಯರಿಗೆ ಬಿಡಬೇಕು. ಪ್ರದರ್ಶನದಲ್ಲೂ ಹೀಗೆ, ಪ್ರೊಜೆಕ್ಟರಲ್ಲೂ ಸಹ ಹೀಗೆ ಮಾಡಿ. ಮ್ಯಾಗಜೈನಲ್ಲೂ ಸಹ ಇಂತಹ ಒಳ್ಳೊಳ್ಳೆ ಚಿತ್ರವನ್ನು ಮಾಡಿ ಜೊತೆ-ಜೊತೆಗೆ ತಿಳುವಳಿಕೆಯನ್ನು ಕೊಡಿ. ನಂತರ ಅದನ್ನು ಯಾರಿಗಾದರೂ ಉಡುಗೊರೆ ಕೊಡಬೇಕು. ಹಠಯೋಗ ಮತ್ತು ರಾಜಯೋಗದ ವ್ಯತ್ಯಾಸವನ್ನು ಬಹಳ ಚೆನ್ನಾಗಿ ಬರೆಯಬೇಕು. ಹಠಯೋಗವೂ ಸಹ ಒಂದು ಪ್ರಕಾರದ ಹಿಂಸೆಯಾಗಿದೆ ಏಕೆಂದರೆ ಶರೀರಕ್ಕೆ ಕಷ್ಟವನ್ನು ಕೊಡುತ್ತಾರೆ. ನಿಮ್ಮದು ಅಹಿಂಸೆಯ ಯೋಗ ಯಾವುದು ಅತೀ ಸಹಜವಾಗಿದೆ. ಇದು ಅತೀ ಸಹಜವಾಗಿದೆ ನಡೆದಾಡುತ್ತಾ, ತಿರುಗಾಡುತ್ತಾ ತಂದೆಯನ್ನು ನೆನಪು ಮಾಡುತ್ತಾ ಇರಿ. ಹಿಂಸಕ ಮತ್ತು ಅಹಿಂಸಕದ ಬಗ್ಗೆಯೂ ಸಹ ಸಿದ್ಧ ಮಾಡಬೇಕು. ಕೆಲವರು ಶರೀರದ ಆರೋಗ್ಯಕ್ಕಾಗಿ ಕ್ರಿಯೆಯನ್ನು ಮಾಡುತ್ತಾರೆ. ಅವರೇನೂ ಪರಮಾತ್ಮನೊಂದಿಗೆ ಮಿಲನ ಮಾಡುವುದಿಲ್ಲ. ಅದಕ್ಕೂ ಸಹ ಯೋಗ ಎಂದು ಹೇಳುತ್ತಾರೆ. ಯೋಗಾಶ್ರಮವಲ್ಲವೇ. ಇದು ಸಹಜ ರಾಜಯೋಗ, ಈಶ್ವರ ಕಲಿಸಿರುವಂತಹ ಯೋಗ ಎಂದು ಇದನ್ನು ಚೆನ್ನಾಗಿ ತಿಳಿಸಬೇಕು. ಯಾರ ಬುದ್ಧಿಯೋಗ ಇಡೀ ದಿನ ಅಲ್ಲ-ಸಲ್ಲದ ಮಾತಿನಲ್ಲಿ ಇರುತ್ತದೆ ಅವರು ಏನು ತಿಳಿಸಿಕೊಡಲು ಸಾಧ್ಯ? ಯಾರ ಬುದ್ಧಿಯಲ್ಲಿ ನಾನು ಸೇವೆ ಮಾಡಬೇಕು ಎಂಬುದು ಇರುತ್ತದೆ ಅವರು ಮಾಡುತ್ತಾರೆ. 8 ಗಂಟೆ ಉದ್ಯೋಗ ಮಾಡಿ ನಂತರ ಈ ಸಂಪಾದನೆಯನ್ನು ಮಾಡಿಕೊಳ್ಳಬೇಕು, ಅದು ಸ್ಥೂಲ ಸಂಪಾದನೆ, ಇದು ಆತ್ಮೀಯ ಸಂಪಾದನೆಯಾಗಿದೆ. ಅಂದಾಗ ಈ ಆತ್ಮೀಯ ಸಂಪಾದನೆಯಲ್ಲಿ ಬಹಳ ಗಮನ ಕೊಡಬೇಕು. ಯೋಗವನ್ನು ಬಹಳ ಅಭ್ಯಾಸ ಮಾಡಬೇಕು. ಬೆಳಗ್ಗೆ ಎದ್ದು ತಂದೆಯನ್ನು ಬಹಳ ಪ್ರೀತಿಯಿಂದ ನೆನಪು ಮಾಡಬೇಕು. ಯಾರನ್ನು ತಂದೆ ಒಂದು ಅಥವಾ ಎರಡನೆಯ ನಂಬರಿನಲ್ಲಿ ಇಡುತ್ತಾರೆ ಅವರೂ ಸಹ ನೆನಪು ಮಾಡುವುದಿಲ್ಲ. ಭಾಷಣವನ್ನು ಬಹಳ ಚೆನ್ನಾಗಿ ಮಾಡುತ್ತಾರೆ ಆದರೆ ನೆನಪು ಮಾಡುವುದಿಲ್ಲ. ಆತ್ಮನೆನಪಿನಿಂದಲೇ ಹಾರುತ್ತದೆ. ಜ್ಞಾನದಿಂದ ಹಾರುತ್ತದೆಯೇನು? ಧ್ಯಾನದಲ್ಲೂ ಸಹ ನೆನಪಿನಿಂದಲೇ ಹೋಗುತ್ತಾರೆ. ಜ್ಞಾನದ ಮಾತು ಇದರಲ್ಲಿ ಇರುವುದೇ ಇಲ್ಲ. ಧ್ಯಾನ ಕೇವಲ ಬಿಡುಗಾಸಿನ ಮಾತಾಗುತ್ತದೆ. ಕೆಲವರಿಗೆ ತಕ್ಷಣವೇ ಶ್ರೀಕೃಷ್ಣನ ಸಾಕ್ಷಾತ್ಕಾರವಾಗುತ್ತದೆ. ಕೆಲವು ಮಕ್ಕಳು ಬರೆಯುತ್ತಾರೆ - ಬಾಬಾ ನಾವು ನಿಮ್ಮನ್ನು ತಿಳಿದುಕೊಂಡಿದ್ದೇವೆ, ಅವರು ಧ್ಯಾನದಲ್ಲಿ ಬ್ರಹ್ಮಾರವರನ್ನೂ ನೋಡುತ್ತಾರೆ ಮತ್ತು ಪ್ರೇರಣೆಯೂ ಸಹ ಸಿಗುತ್ತದೆ ನಂತರ ಅವರಿಗೆ ನಿಶ್ಚಯವಾಗುತ್ತದೆ, ಯಾರೆಲ್ಲಾ ತಂದೆಯನ್ನು ನೋಡೇ ಇಲ್ಲ ಅವರೂ ಸಹ ಬರೆಯುತ್ತಾರೆ ನಾವು ತಂದೆಯನ್ನು ಬಹಳ ನೆನಪು ಮಾಡುತ್ತೇವೆ ಎಂದು. ನಾವು ನಿಮ್ಮಿಂದ ಆಸ್ತಿಯನ್ನು ತೆಗೆದುಕೊಂಡೇ ಬಿಡುತ್ತೇವೆ. ನಿಮಗೆ ತಿಳಿದಿದೆ ನಾವು ನೆನಪು ಮಾಡುತ್ತೇವೆ, ತಾವು ಎಂದು ಹೇಳುವಾಗ ಶಿವತಂದೆಯ ನೆನಪು ಬರುತ್ತದೆ. ಬಂಧನದಲ್ಲಿ ಇರುವಂತಹ ಮಕ್ಕಳು ಬಹಳ ನೆನಪು ಮಾಡುತ್ತಾರೆ. ಅವರಷ್ಟು ಎದುರಿನಲ್ಲಿ ಕುಳಿತಿರುವವರು ಮಾಡುವುದಿಲ್ಲ. ನೆನಪು ಮಾಡುವುದು ಒಂದೇ ಮಾತಾಗಿದೆ. ಗಾಂಧಿಜೀಯವರು ರಾಮರಾಜ್ಯವಾಗಲಿ ಎಂದು ಹೇಳುತ್ತಿದ್ದರು. ಈಗ ರಾವಣ ರಾಜ್ಯವಾಗಿದೆ. ಇದು ರಾವಣರಾಜ್ಯವಾಗಿದೆ. ಇದರ ಬಗ್ಗೆ ನೀವು ತಿಳಿಸಿಕೊಡಬಹುದು. ಈ ರೀತಿಯಾಗಿ ನೀವು ತಿಳಿಸಿಕೊಡಬಹುದು. ಏರುವಕಲೆಯನ್ನು ಪರಮಾತ್ಮನೇ ಮಾಡಿಸಲು ಸಾಧ್ಯವಿದೆ. ಮಿಕ್ಕವರು ಎಲ್ಲರೂ ಒಬ್ಬರಿನೊಬ್ಬರನ್ನು ಬೀಳಿಸುತ್ತಿರುತ್ತಾರೆ. ದೇವತೆಗಳೂ ಸಹ ಕೆಳಗೆ ಇಳಿಯುತ್ತಾ ಇರುತ್ತಾರೆ, ಭಲೆ ಸುಖದಲ್ಲೇ ಇರುತ್ತಾರೆ, ಆದರೆ ಕಲೆಗಳು ಕಡಿಮೆ ಆಗುತ್ತಾ ಹೋಗುತ್ತದೆ. ಏಣಿಯ ತರಹ ಇಳಿಯುತ್ತಾ ಹೋಗುತ್ತಾರೆ ಏಕೆಂದರೆ ಡ್ರಾಮಾನೂ ಸಹ ಏಣಿಯ ರೀತಿಯಲ್ಲಿ ನಿರಂತರ ನಡೆಯುತ್ತಾ ಇರುತ್ತದೆ. ಏರುವಕಲೆ ಒಬ್ಬರ ಮೂಲಕವೇ ಆಗುತ್ತದೆ. ಇದೆಲ್ಲವನ್ನು ತಿಳಿಸಿಕೊಡಲು ಪ್ರೊಜೆಕ್ಟರ್ ಬಹಳ ಚೆನ್ನಾಗಿದೆ. ಸೇವಾಕೇಂದ್ರಗಳೂ ಸಹ ವೃದ್ಧಿ ಆಗುತ್ತಾ ಹೋಗುತ್ತವೆ. ಪ್ರತಿಯೊಂದು ಭಾಷೆಯಲ್ಲಿ ಸ್ಲೈಡ್ಸ್ನ್ನು ಮಾಡುತ್ತಾ ಹೋಗಿ ಎಂದು ತಂದೆ ಹೇಳುತ್ತಾರೆ ಆದರೆ ಈ ರೀತಿ ಕೆಲಸ ಮಾಡುವವರು ಯಾರೂ ಇಲ್ಲ. ತಂದೆ ಯುಕ್ತಿಯನ್ನಂತೂ ತಿಳಿಸಿಕೊಡುತ್ತಾರೆ ಆದರೆ ಕೆಲಸ ಮಾಡುವವರೂ ಬೇಕು. ಆಗ ಸೇವೆ ಬಹಳ ವೃದ್ಧಿ ಆಗಲು ಸಾಧ್ಯವಿದೆ.

ಮಕ್ಕಳು ತಮ್ಮ ಸಹೋದರ-ಸಹೋದರಿಯರ ಮೇಲೆ ಬಹಳ ದಯೆಯನ್ನು ತೋರಿಸಬೇಕು ತಂದೆ ದಯಾಹೃದಯಿ ಅಲ್ಲವೇ. ನಾನು ಬರುವುದೇ ಭಾರತದೇಶದಲ್ಲಿ, ಬೇರೆ ಜಾಗದಲ್ಲಿ ನಾನು ಬರುವುದಿಲ್ಲ, ಶಿವಜಯಂತಿಯೂ ಸಹ ಭಾರತದಲ್ಲಿಯೇ ಆಚರಣೆ ಮಾಡಲಾಗುತ್ತದೆ. ಆದರೆ ಯಾರಿಗೂ ತಿಳಿದಿಲ್ಲ. ನೋಡಿ ಕ್ರಿಸ್ತನ ಜಯಂತಿಯನ್ನು ಆಚರಿಸುತ್ತಾರೆ, ಅಂದಾಗ ಅವನ ಕರ್ತವ್ಯವನ್ನು ತಿಳಿದಿದ್ದಾರೆ, ಆದರೆ ಶಿವನ ಕರ್ತವ್ಯವನ್ನು ತಿಳಿದಿಲ್ಲ. ಅವರೇ ಪತಿತಪಾವನನಾಗಿದ್ದಾರೆ. ಭಾರತ ಅತೀ ದೊಡ್ಡ ತೀರ್ಥ ಸ್ಥಾನವಾಗಿದೆ. ಗೀತೆಯಲ್ಲಿ ಕೃಷ್ಣನ ಹೆಸರನ್ನು ಹಾಕಿರುವುದರಿಂದ ಇಷ್ಟು ದೊಡ್ಡ ತೀರ್ಥಸ್ಥಾನವಾದ ಭಾರತದ ಮಹಿಮೆ ಗುಪ್ತವಾಗಿ ಹೋಗಿದೆ. ನೋಡಿ, ಮೊಹಮ್ಮದ್ ಗಜನಬಿ ಮಂದಿರವನ್ನು ಲೂಟಿ ಮಾಡಿದ್ದ, ಒಂದುವೇಳೆ ಅವನಿಗೆ ಇದು ನಮ್ಮ ತಂದೆಯ ಮಂದಿರ ಎಂದು ತಿಳಿದಿದ್ದರೆ ಅವನು ಲೂಟಿ ಮಾಡುತ್ತಿದ್ದನೇ? ಯಾರು ಸ್ವರ್ಗವನ್ನು ಸ್ಥಾಪನೆ ಮಾಡಿದ್ದರೋ ಆ ಅಲ್ಲನ ಮಂದಿರವನ್ನು ಯಾರು ಲೂಟಿ ಮಾಡುತ್ತಾರೆ? ಒಂದುವೇಳೆ ಶಿವಬಾಬಾನನ್ನು ತಿಳಿದುಕೊಂಡಿದ್ದೇ ಆದರೆ ಎಂದೂ ಮಂದಿರಕ್ಕೆ ಕೈ ಹಾಕುವುದಿಲ್ಲ. ಭಲೆ ಶಿವನಿಗೆ ತಲೆ ಬಾಗುತ್ತಾರೆ. ಅವರನ್ನು ತಿಳಿದಿದ್ದೇ ಆದರೆ ಲೂಟಿ ಮಾಡುವುದಿಲ್ಲ. ಗೀತೆಯಲ್ಲಿ ಕೇವಲ ಶ್ರೀಕೃಷ್ಣನ ಹೆಸರು ಹಾಕಿರುವುದರಿಂದ ಇದೆಲ್ಲಾ ಆಯಿತು. ಗೀತೆ ಖಂಡನೆ ಆಗಿರುವುದರಿಂದ ನೋಡಿ ಯಾವ ಪರಿಸ್ಥಿತಿಯಾಗಿದೆ?

ಒಂದುವೇಳೆ ಶಿವತಂದೆಯ ಹೆಸರಿದ್ದರೆ ಅವರೇ ಗತಿ-ಸದ್ಗತಿ ದಾತ, ಇದು ಒಬ್ಬರ ಮಹಿಮೆಯಾಗಿದೆ. ಒಂದುವೇಳೆ ಅವರು ಬರಲಿಲ್ಲವೆಂದರೆ ಪಾವನರು ಹೇಗೆ ಆಗುತ್ತೀರಿ? ಭಾರತವನ್ನು ಹೇಗೆ ಸ್ವರ್ಗ ಮಾಡಲು ಸಾಧ್ಯ? ಇದು ಗುಪ್ತ ಮಾತಲ್ಲವೇ. ನಾವು ದುರ್ಗತಿಯಲ್ಲಿ ಇದ್ದೆವು ಎಂಬುದು ತಿಳಿದಿದೆ. ಈಗ ನಾವು ಇಲ್ಲಿ ಕುಳಿತಿದ್ದೇವೆ ಆದರೆ ಹೋಗುವವರಿದ್ದೇವೆ. ಮಕ್ಕಳಿಗೆ ಬಹಳ ಖುಷಿ ಆಗಬೇಕು ನಾವು ನಮಗೋಸ್ಕರ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದೇವೆ. ಅನ್ಯರಿಗೂ ದಾರಿ ತೋರಿಸಿ, ಪ್ರಜೆಗಳನ್ನಾಗಿ ಮಾಡಿಕೊಳ್ಳಬೇಕು. ಬಹಳ ಪರಿಶ್ರಮ ಪಡಬೇಕು. ಆದರೆ ಇದು ಬಹಳ ಸಹಜ. ಕೇವಲ ತಂದೆ ಮತ್ತು ಆಸ್ತಿಯನ್ನು ನೆನಪು ಮಾಡಿ, ಸ್ವರ್ಗವನ್ನು ನೆನಪು ಮಾಡಿ. ಇದು ನರಕವಾಗಿದೆ. ಹಂ ಸೋನ ಅರ್ಥವನ್ನೂ ತಂದೆ ತಿಳಿಸಿದ್ದಾರೆ, ನಾವೇ ದೇವತೆಗಳಾಗುತ್ತೇವೆ, ನಾವೇ ಕ್ಷತ್ರಿಯರು.......... ಬೇರೆ ಯಾರೂ ಈ ಮಾತನ್ನು ತಿಳಿದುಕೊಳ್ಳುವುದಿಲ್ಲ. ವಿರಾಟ ರೂಪದ ಚಿತ್ರದಲ್ಲಿ ನಾವೇ ದೇವತೆಗಳಾಗುತ್ತೇವೆ ಎಂದು ತಿಳಿಸಬೇಕು. ನಾವು ಈಗ ಸ್ವರ್ಗದಲ್ಲಿ ಹೋಗಿಯೇಬಿಡುತ್ತೇವೆ. ಅನೇಕರು ಇನ್ನು ಎಷ್ಟು ಸಮಯ ಉಳಿದಿದೆ? ಎಂದು ಕೇಳುತ್ತಾರೆ. ತಂದೆಯು ಹೇಳುತ್ತಾರೆ ನಾಟಕ ಮಾಡಲ್ಪಟ್ಟಿದೆ. ಎಷ್ಟೆಷ್ಟು ಸ್ಥಾಪನೆ ಆಗುತ್ತಾ ಹೋಗುತ್ತದೋ ವಿನಾಶದ ಜ್ವಾಲೆಯೂ ಸಹ ನಿಧಾನ-ನಿಧಾನವಾಗಿ ಹೆಚ್ಚುತ್ತಾ ಹೋಗುತ್ತದೆ. ಧರ್ಮಗಳಲ್ಲಿ ಜಗಳಗಳು ಪ್ರಾರಂಭವಾಗುತ್ತಾ ಹೋಗುತ್ತದೆ. ಮೊದಲು ಪಾರ್ಟಿಶನ್ ಇತ್ತೇನು? ಮೊದಲು ಒಂದೇ ದೇವತಾ ಧರ್ಮವಿತ್ತು ಎಂಬುದು ನಿಮಗೆ ತಿಳಿದಿದೆ. ಹೇಗೆ ಹಾಡಿದೆ - ನೀವು ಸಿಕ್ಕಿದರೆ ನಾವು ಸ್ವರ್ಗದರಾಜ್ಯವನ್ನು ಯೋಗಬಲದಿಂದ ತೆಗೆದುಕೊಳ್ಳುತ್ತೇವೆ. ಬಾಹುಬಲದಿಂದಲ್ಲ. ನಮಗೆ ರಾಜ್ಯ ಸಿಗಬೇಕಾಗಿದೆ. ಯಾವಾಗ ದೇವತೆಗಳ ರಾಜ್ಯವಿರುತ್ತದೆ ಅಲ್ಲಿ ಕ್ರಿಶ್ಚಿಯನ್ನರು, ಬೌದ್ಧಿಯರು ಇರುವುದಿಲ್ಲ. ಈಗ ದೇವತಾಧರ್ಮ ಸ್ಥಾಪನೆ ಆಗುತ್ತಿದೆ. ಭಾರತ ಅವಿನಾಶಿ ಖಂಡವಾಗಿದೆ. ತಂದೆಯೂ ಇಲ್ಲೇ ಬಂದಿದ್ದಾರಲ್ಲವೇ. ಡ್ರಾಮಾದಲ್ಲಿ ಯೋಗಬಲದಿಂದ ರಾಜ್ಯ ಸಿಗುತ್ತದೆ ಎಂಬುದಿದೆ. ಭಾರತದ ಪ್ರಾಚೀನ ರಾಜಯೋಗ ಪ್ರಸಿದ್ಧವಾದದ್ದು ಆದರೆ ಯೋಗವನ್ನು ಕಲಿಸಿದವರು ಯಾರು? ಅದು ಹೇಗೆ ಎಂಬುದು ಯಾರಿಗೂ ತಿಳಿದಿಲ್ಲ. ಕೃಷ್ಣ ಯೋಗವನ್ನು ಕಲಿಸಲಿಲ್ಲ, ಪರಮಪಿತಪರಮಾತ್ಮನೇ ಯೋಗವನ್ನು ಕಲಿಸುತ್ತಿದ್ದಾರೆ. ಇದು ಎಂತಹ ಸೂಕ್ಷ್ಮವಾದ ಮಾತಾಗಿದೆ. ಬುದ್ಧಿಯಿಂದಲೇ ಜಾರಿ ಹೋಗುತ್ತದೆ. ಕೆಲವರು ತಿಳಿದುಕೊಂಡು ಬಿಟ್ಟುಬಿಡುತ್ತಾರೆ. ಅದಕ್ಕೆ ತಂದೆಯು ಹೇಳುತ್ತಾರೆ ಬುದ್ಧಿವಂತರನ್ನು ನೋಡಬೇಕೆಂದರೆ ಇಲ್ಲಿಯೇ ನೋಡಿ...... ಬುದ್ಧಿವಂತರು ಆಸ್ತಿಯನ್ನು ತೆಗೆದುಕೊಳ್ಳುತ್ತಾರೆ. ಬುದ್ಧಿಹೀನರು ಬಿಟ್ಟುಬಿಡುತ್ತಾರೆ. ಸ್ವರ್ಗದ ಆಸ್ತಿಯನ್ನು ಕಳೆದುಕೊಳ್ಳುತ್ತಾರೆ. ಮಹಾನ್ ಮೂರ್ಖರು, ಮಹಾನ್ ಬುದ್ಧಿವಂತರನ್ನು ನೋಡಬೇಕೆಂದರೆ ಇಲ್ಲಿಯೇ ನೋಡಿ. ಮೂಲವತನದಲ್ಲಿ ಮಡಿಲು ಇರುವುದಿಲ್ಲ (ಮಡಿಲಿನ ಲೆಕ್ಕವಿಲ್ಲ). ಮಗ ಹುಟ್ಟುತ್ತಾನೆಂದರೆ ಗುರುವಿನ ಮಡಿಲನ್ನು ಕೊಡುತ್ತಾರೆ. ಗುರುವಿನ ಮಡಿಲಲ್ಲಿ ಹೋಗಲಿಲ್ಲವೆಂದರೆ ದುರ್ಗತಿಯನ್ನು ಪಡೆಯುತ್ತಾರೆಂದು ತಿಳಿಯುತ್ತಾರೆ. ಚಿಕ್ಕ ಮಗುವನ್ನೇ ಗುರುವನ್ನಾಗಿ ಮಾಡಿಬಿಡುತ್ತಾರೆ. ಗುರುವಿಲ್ಲದೇ ಗತಿ ಇಲ್ಲ. ಇದನ್ನು ಆ ಗುರುಜನರು ತಿಳಿಸಿದ್ದಾರೆ. ಯಾವಾಗ ಶರೀರ ಬಿಡುತ್ತೇವೆ ಎಂಬುದು ಗೊತ್ತಿಲ್ಲ. ಅಲ್ಲಿ ಜನ್ಮವನ್ನು ತೆಗೆದುಕೊಂಡ ಮೇಲೆ ನಂತರ ಗುರುವಿನ ಬಳಿ ಹೋಗುತ್ತಾರೆ. ಇಲ್ಲಿ ಮೂವರು ಕಂಬೈನ್ಡ್ ಇದ್ದಾರೆ. ಇದು ಯಾವುದೇ ಶಾಸ್ತ್ರದಲ್ಲಿ ಬರೆದಿಲ್ಲ. ಅವರೇ ತಂದೆ, ಶಿಕ್ಷಕ, ಗುರುವಿನ ಮಡಿಲಾಗಿದೆ. ಶಿವತಂದೆಗೆ ತಂದೆ ಇದ್ದಾರೆ? ಎಂದು ಬಾಬಾ ಕೇಳಿದರು. ಅದಕ್ಕೆ ಅವರು ಹಾ ಎಂದು ಹೇಳುತ್ತಾರೆ. ಶಿವಬಾಬಾನಿಗೆ ಶಿಕ್ಷಕರಿದ್ದಾರೆಯೇ? ಗುರು ಇದ್ದಾರೆಯೇ? ಇಲ್ಲ. ಕೇವಲ ತಂದೆ-ತಾಯಿ ಸಿಗುತ್ತಾರೆ, ಇದು ಗುಹ್ಯವಾದಂತಹ ಮಾತು. ತಂದೆ ಮಕ್ಕಳ ಮೇಲೆ, ಮಕ್ಕಳು ತಂದೆಯ ಮೇಲೆ ಬಲಿಹಾರಿ ಆಗುತ್ತಾರೆ. ಲೌಕಿಕದಲ್ಲಿ ಮಕ್ಕಳು ತಂದೆಯ ಮೇಲೆ ಬಲಿಹಾರಿ ಆಗುವುದಿಲ್ಲ. ತಂದೆ ಹೋಗಿಬಿಡುತ್ತಾರೆ, ಪರಮಾತ್ಮ ತಂದೆ, ಶಿಕ್ಷಕ, ಗುರು ಆಗಿದ್ದಾರೆ ಅವರಿಂದ ಆಸ್ತಿ ಸಿಗುತ್ತದೆ ಎಂದು ತಿಳಿದುಕೊಳ್ಳುವ ಮಾತಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸ್ವದರ್ಶನಚಕ್ರಧಾರಿ ಆಗಬೇಕು. ನಾವು ಬ್ರಾಹ್ಮಣರು ಶಿಖೆ ಸಮಾನರು, ಈಶ್ವರೀಯ ಸಂಪ್ರದಾಯದವರು, ಈ ನಶೆ ಇರಬೇಕು.

2. ತಮ್ಮ ಸಮಯವನ್ನು ತಂದೆಯ ನೆನಪಿನಲ್ಲಿ ಸಫಲ ಮಾಡಬೇಕು. ಈಶ್ವರೀಯ ಸೇವೆಯಲ್ಲಿ ತತ್ಪರರಾಗಿರಬೇಕು. ತಂದೆಯ ಮೇಲೆ ಸಂಪೂರ್ಣ ಬಲಿಹಾರಿ ಆಗಬೇಕು.

ವರದಾನ: ಏಕರಸ ಸ್ಥಿತಿಯ ಆಸನದ ಮೇಲೆ ಮನಸ್ಸು-ಬುದ್ಧಿಯನ್ನು ಕುಳ್ಳಿರಿಸುವಂತಹ ಸತ್ಯ ತಪಸ್ವಿ ಭವ

ತಪಸ್ವಿ ಸದಾ ಆಸನಧಾರಿಗಳಾಗಿರುತ್ತಾರೆ, ಅವರು ಯಾವುದಾದರೂ ಒಂದು ಆಸನದ ಮೇಲೆ ಕುಳಿತು ತಪಸ್ಸನ್ನು ಮಾಡುತ್ತಾರೆ. ನೀವು ತಪಸ್ವಿ ಮಕ್ಕಳ ಆಸನವಾಗಿದೆ ಏಕರಸ ಸ್ಥಿತಿ, ಫರಿಶ್ತಾ ಸ್ಥಿತಿ, ಇವೇ ಶ್ರೇಷ್ಠ ಸ್ಥಿತಿಗಳ ಆಸನದ ಮೇಲೆ ಸ್ಥಿತರಾಗಿ ತಪಸ್ಸನ್ನು ಮಾಡಿ. ಹೇಗೆ ಸ್ಥೂಲ ಆಸನದ ಮೇಲೆ ಶರೀರ ಕುಳಿತುಕೊಳ್ಳುವುದು ಅದೇ ರೀತಿ ಶ್ರೇಷ್ಠ ಸ್ಥಿತಿಯ ಆಸನದ ಮೇಲೆ ಮನಸ್ಸು-ಬುದ್ಧಿಯನ್ನು ಕುಳ್ಳಿರಿಸಿ ಮತ್ತು ಎಷ್ಟು

ಸಮಯ ಬೇಕೊ, ಯಾವಾಗ ಬೇಕೊ- ಆಸನದ ಮೇಲೆ ಕುಳಿತುಕೊಳ್ಳಿ. ಈ ಸಮಯ ಶ್ರೇಷ್ಠ ಸ್ಥಿತಿಯ ಆಸನದ ಮೇಲೆ ಕುಳಿತುಕೊಳ್ಳುವವರಿಗೆ ಭವಿಷ್ಯದಲ್ಲಿ ರಾಜ್ಯದ ಸಿಂಹಾಸನ ಪ್ರಾಪ್ತಿಯಾಗುವುದು.

ಸ್ಲೋಗನ್: ಬೇರೆಯವರ ವಿಚಾರಗಳನ್ನು ತನ್ನ ವಿಚಾರಗಳ ಜೊತೆ ಸೇರಿಸಿ ಸರ್ವರಿಗೆ ಸನ್ಮಾನ ಕೊಡುವುದೇ ಮಾನನೀಯರಾಗುವ ಸಾಧನವಾಗಿದೆ.